**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 443/2024**

ಫಿರ್ಯಾದುದಾರರುಃ ಗುಂಡ್ಲುಪೇಟೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : 1. ಸುರೇಶ ಕೆ @ ಸೂರಿ
ಬಿನ್ ಕುಮಾರಾಚಾರಿ, 23 ವರ್ಷ

2. ಕುಮಾರ @ ಕುಮಾರಾಚಾರಿ
ಬಿನ್ ಲೇಟ್ ಶಿವಣ್ಣಚಾರಿ, 54 ವರ್ಷ

3. ರಾಜಾಚಾರಿ @ ಬಣ್ಣದ ರಾಜ
ಬಿನ್ ಕೃಷ್ಣಾಚಾರಿ, 49 ವರ್ಷ
ಎಲ್ಲರ ವಾಸಃ ದೊಡ್ಡತುಪ್ಪೂರು ಗ್ರಾಮ,
ಗುಂಡ್ಲುಪೇಟೆ ತಾಲ್ಲೂಕು.

**ದೋಷಾರೋಪಣೆ**

ಶ್ರೀ ಬಸವರಾಜ ತಳವಾರ. ಬಿಎ., ಎಲ್ ಎಲ್ ಬಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದ ನ್ಯಾ ದಂ ಗಳು ಗುಂಡ್ಲುಪೇಟೆ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿನಾಂಕ 25.05.2024 ರಂದು ರಾತ್ರಿ 09.15 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದು ದೊಡ್ಡತುಪ್ಪೂರು ಗ್ರಾಮದಲ್ಲಿ ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಬಸವೇಶ್ವರರ ಭಾವಚಿತ್ರ ಮೆರವಣಿಗೆ ಇದ್ದು, ಬಸವೇಶ್ವರರ ಭಾಚಿತ್ರವನ್ನು ಟ್ರ್ಯಾಕ್ಟರ್ ಗೆ ಕಟ್ಟಿದ್ದು ಚಾಸಾ–2 ರವರು ಟ್ರ್ಯಾಕ್ಟರ್ ನ್ನು ಚಾಲನೆ ಮಾಡುತ್ತಿದ್ದು, ಮೆರವಣಿಗೆ ಮುಗಿದು ಚಾಸಾ–2 ಸ್ವಾಮಿರವರು ಟ್ರ್ಯಾಕ್ಟರ್ ನ್ನು ನಿಲ್ಲಿಸಲು ಹೋದಾಗ 1ನೇ ಆರೋಪಿಯಾದ ನೀವು ಟ್ರಾಕ್ಟರ್ ಮುಂದೆ ಕುಣಿಯುತ್ತಿದ್ದು ಆಗ ಚಾಸಾ–2 ಸ್ವಾಮಿರವರು 1ನೇ ಆರೋಪಿಯಾದ ನಿಮಗೆ ಟ್ರ್ಯಾಕ್ಟರ್ ನಿಲ್ಲಿಸಬೇಕು ಮೆರವಣಿಗೆ ಮುಗಿದಿದ್ದು ಕುಣಿಯುವುದನ್ನು ನಿಲ್ಲಿಸು ಎಂದಾಗ 1ನೇ ಆರೋಪಿಯಾದ ನೀವು ಚಾಸಾ–2 ಸ್ವಾಮಿರವರ ಕುತ್ತಿಗೆ ಪಟ್ಟಿ ಹಿಡಿದು ಟ್ರ್ಯಾಕ್ಟರ್ ನಿಂದ ಕೆಳಕ್ಕೆ ಎಳೆದುಕೊಂಡು ಮುಂದೆ ಹೋಗದಂತೆ ತಡೆದು ನಿಲ್ಲಿಸಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ 341 ಸಹವಾಚಕ ಕಂ 34ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ–2 ಸ್ವಾಮಿರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 1ನೇ ಆರೋಪಿಯಾದ ನೀವು ಚಾಸಾ–2 ಸ್ವಾಮಿ ರವರನ್ನು ಕೆಳಕ್ಕೆ ಕೆಡವಿಕೊಂಡು ಬೋಳಿಮಗನೇ, ಸೂಳೇ ಮಗನೇ ನನ್ನನ್ನು ಜಾಗ ಬಿಟ್ಟು ಕುಣಿ ಅಂತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ 504 ಸಹವಾಚಕ ಕಲಂ 34 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ–2 ಸ್ವಾಮಿ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 1ನೇ ಆರೋಪಿಯಾದ ನೀವು ಅಲ್ಲೆ ಬಿದ್ದಿದ್ದ ಒಂದು ಕಲ್ಲಿನಿಂದ ಚಾಸಾ–2 ಸ್ವಾಮಿ ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರೆಂದು ಹಾಗೂ ಆಗ ಅಲ್ಲಿಗೆ ಬಂದ 2ನೇ ಮತ್ತು 3 ನೇ ಆರೋಪಿಗಳಾದ ನೀವು ಚಾಸಾ–2 ಸ್ವಾಮಿ ರವರ ಕತ್ತನ್ನು ಹಿಸುಕಿ ನೋವುಂಟುಪಡಿಸಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ 324 ಸಹವಾಚಕ ಕಲಂ 34 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ–2 ಸ್ವಾಮಿ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ 506 ಸಹವಾಚಕ ಕಲಂ 34 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ, ಈ ನ್ಯಾಯಾಲಯ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ :

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಂಡ್ಲುಪೇಟೆ.